ಶ್ರೀ ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ ಗುಲ್ಬರ್ಗಾ ಜಿಲ್ಲೆಯ ಯಾದಗಿರಿ ತಾಲ್ಲೂಕಿನ ಹಟ್ಟಿಗುಣಿ ಗ್ರಾಮದಲ್ಲಿ ಸಂಭವಿಸಿದ ಆಕಸ್ಮಿಕ ಬೆಂಕಿ ಅನಾಹುತದಿಂದ ೪೦ ಗುಡಿಸಲುಗಳು ಸುಟ್ಟು ಸುಮಾರು ೪-೫ ಲಕ್ಷ ರೂಪಾಯಿಗಳ ನಷ್ಟ ಉಂಟಾಗಿರುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಸ್. ಆರ್ ಬೊಮ್ಮಾಯಿ (ಕಂದಾಯ ಸಚಿವರು)—ಮಾನ್ಯ ಅಧ್ಯಕ್ಷರೇ ನಾನು ಈ ಕೆಳಗಿನ ಹೇಳಿಕೆಯನ್ನು ಕೊಡಬಯಸುತ್ತೇನೆ.

ಗುಲ್ಬರ್ಗಾ ಜಿಲ್ಲೆಯ ಯಾದಗಿರಿ ತಾಲ್ಲೂಕಿನ ಹಟ್ಟಿಗುಣಿ ಗ್ರಾಮದಲ್ಲಿ ದಿನಾಂಕ ೧೬-೩-೧೯೮೫ ರಂದು ಆಕಸ್ಮಿಕ ಬೆಂಕಿ ಅಪಘಾತವಾಯಿತು. ಈ ಅನಾಹುತದಲ್ಲಿ ಒಟ್ಟು ೩೩ ಜನರು ನೊಂದಿರುವರು ಯಾವ ಪ್ರಾಣ ಹಾನಿಯೂ ಉಂಟಾಗಿರುವುದಿಲ್ಲ ಕಂದಾಯ ಇಲಾಖೆಯ ಅಧಿಕಾರಿಗಳು ನೊಂದ ಸಂತ್ರಸ್ಥರಿಗೆ ತಕ್ಷಣವೇ ಊಟ ಮತ್ತು ವಸತಿ ಸೌಕರ್ಯಗಳನ್ನು ಒದಗಿಸಿ ಕೊಟ್ಟಿರುವರು. ಈ ಅನಾಹುತದಲ್ಲಿ ನೊಂದವರಿಗೆ ಸಹಾಯ ಒದಗಿಸುವ ಕಾರ್ಯದಲ್ಲಿ ಸಾರ್ವಜನಿಕರಿಂದ ಸಹಕಾರ ಪಡೆಯಲಾಯಿತು. ೩೦ ನೊಂದ ಸಂತಸ್ಥರಿಗೆ ನಗದು ರೂಪದಲ್ಲಿ ತಲಾ ರೂಪಾಯಿ ೩೦೦ರಂತೆ ಇಬ್ಬರು ನೊಂದ ಸಂತ್ರಸ್ಥರಿಗೆ ರೂಪಾಯಿ ೧೫೦ ರಂತೆ ಮತ್ತು ಒಬ್ಬ ನೊಂದ ವ್ಯಕ್ತಿ ರೂಪ್ಪಾಯಿ ೧೦೦ರಂತೆ ನೊಂದ ಎಲ್ಲರಿಗೂ ಪರಿಹಾರ ಧನ ಕೊಡಲಾಯಿತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಹಟ್ಟಿಗುಣಿ ಗ್ರಾಮದಲ್ಲಿ ಪ್ರತಿಯೊಂದು ಸಾರಿ ಇದೇ ರೀತಿ ಆಗುತ್ತಿದೆ. ಆ ಬಗ್ಗೆ ತಮಗೂ ಫೋನ್ ಮಾಡಿ ಹೇಳಿದೆ. ಅಲ್ಲಿ ೧೦೦ ಗುಡಿಸಲುಗಳಿವೆ. ಅವರಿಗೆಲ್ಲಾ ರೂರಲ್ ಹೌಸಿಂಗ್ ಸ್ಕೀಂನಲ್ಲಿ ಹಂತ ಹಂತವಾಗಿ ೨೫-೨೫ರಂತೆ ಮನೆಗಳನ್ನು ಕಟ್ಟಿ ಕೊಟ್ಟರೆ ಅವರ ಸಮಸ್ಯೆ ಬಗೆಹರಿಯುತ್ತದೆಂಬ ವಿಚಾರವನ್ನು ಕೂಡ ತಮ್ಮ ಗಮನಕ್ಕೆ ತಂದಿದ್ದೇನೆ. ದಯವಿಟ್ಟು ಈ ವರ್ಷ ೫೦ ಮನೆಗಳ ನಿರ್ಮಾಣ ಕಾರ್ಯವನ್ನಾದರೂ ತೆಗೆದುಕೊಂಡು ಆ ಜನರಿಗೆ ಸಹಾಯ ಮಾಡತಕ್ಕ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರ ಸಲಹೆಯನ್ನು ಗಮನದಲ್ಲಿಟ್ಟುಕೊಂಡು ಕೆಲವೊಂದು ಮನೆಗಳನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ನಿಯಮಾವಳಿ 334ರ ಮೇರೆಗೆ ಚರ್ಚೆ

ಗುಳೇದಗುಡ್ಡ ನಗರಕ್ಕೆ ಕುಡಿಯುವ ನೀರಿನ ಸರಬರಾಜು.

ಶ್ರೀ ನಂಜುಂಡಯ್ಯನ ಮಠ್.—ನಮ್ಮ ಗುಳೇದಗುಡ್ಡ ನಗರಕ್ಕೆ ಮಲಪ್ರಭ ನದಿಯಿಂದ ಕುಡಿಯುವ ನೀರನ್ನು ಸರಬರಾಜು ಮಾಡುತ್ತಿದ್ದರು. ಅದು ಈಗ ಸಂಪೂರ್ಣವಾಗಿ ಬತ್ತಿಹೋಗಿದೆ. ಅದರ ಆಶ್ರಯದಲ್ಲಿ ೪೦೦ ಎಕರೆ ಶೇಂಗಾ ಬೆಳೆದುಕೊಂಡು ಇವತ್ತು ತುಂಬಾ ತೊಂದರೆಗೊಳಗಾಗಿದ್ದಾರೆ. ಆದುದರಿಂದ ಅವರಿಗೆ ನವಿಲು ತೀರ್ಥದಿಂದ ನೀರು ಬಿಟ್ಟರೆ ಸಮಸ್ಯೆಯನ್ನು ಬಗೆಹರಿಸುವುದಕ್ಕಾಗುತ್ತದೆ. ದಯವಮಾಡಿ ಮಾನ್ಯ ಸಚಿವರು ಇದರ ಬಗ್ಗೆ ಹೇಳಬೇಕು.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಸದಸ್ಯರು ಏನು ರೂಲ್ ೩೩೪ರ ಕೆಳಗೆ ವಿಷಯವನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ ಆ ವಿಷಯದಲ್ಲಿ ಪರಿಶೀಲನೆ ಮಾಡಿದ್ದೇವೆ. ಆದರೆ ಆ ಪ್ರಕಾರ ನೀರು ಕೊಡಲಿಕ್ಕೆ ಸಾಧ್ಯವಿಲ್ಲ. ನವಿಲು ತೀರ್ಥದಿಂದ ನೀರನ್ನು ಕೊಡುವ ಮೂಲಕ ೪೦೦ ಎಕರೆ ಜಮೀನಿನಲ್ಲಿ ರೈತರು ಏನು ಶೇಂಗಾ ಬೆಳೆಯನ್ನು ಬೆಳೆದಿದ್ದಾರೆ ಅದನ್ನು ಉಳಿಸಿಕೊಡಬೇಕೆಂದು ಹೇಳಿದ್ದಾರೆ. ನವಿಲು ತೀರ್ಥದಲ್ಲಿ ಕೂಡ ಸಾಕಷ್ಟು ನೀರು ಇಲ್ಲ. ಅದರ ಹಿಂಬಾಗದಲ್ಲಿರತಕ್ಕ ಕಮ್ಯಾಂಡ್ ಏರಿಯಾಕ್ಕೆ ನೀರು ಕೊಡುವುದಕ್ಕೆ ಸಾಧ್ಯವಿಲ್ಲದ ಪರಿಸ್ಥಿತಿ ಇರುವುದರಿಂದ ಬೇರೆ ಕಡೆಗೆ ನೀರು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಬಗ್ಗೆ ಮಾನ್ಯ ಸದಸ್ಯರು ನನ್ನ ಛೇಂಬರಿಗೆ ಬಂದು ಕೂಡ ಚರ್ಚೆ ಮಾಡಿದ್ದಾರೆ. ಅವರಿಗೆ ನಾನು ವಿಷಯವನ್ನು ತಿಳಿಸಿದ್ದೇನೆ.

ಶ್ರೀ ನಂಜಯ್ಯ ಮಾತ್.—ನೀರು ಕೊಡುವುದಕ್ಕಾಗದಿದ್ದರೆ ಅವರಿಗೆ ಏನಾದರೂ ಪರಿಹಾರ ಕೊಡುವುದಕ್ಕೆ ಪ್ರಯತ್ನ ಮಾಡಬೇಕು. ನಮ್ಮದು ಬರಗಾಲ ಜಿಲ್ಲೆ. ೪೦೦ ಎಕರೆಯಲ್ಲಿ ಶೇಂಗಾ ಹಾಕಿದವರಿಗೆ ಏನಾದರೂ ಪರಿಹಾರ ಕೊಟ್ಟರೆ ಮಾತ್ರ ಬದುಕುವುದಕ್ಕೆ ಸಾಧ್ಯವಿದೆ.

ಶ್ರೀ ಹೆಚ್. ಡಿ. ದೇವೇಗೌಡ.—ಶೇಂಗಾ ಹಾಕುವುದಕ್ಕೆ ನಾವೇನು ಅವರಿಗೆ ತಿಳಿಸಿಲ್ಲ, ನೀವೇ ಬೆಳೆ ಇಟ್ಟುಕೊಳ್ಳಿ ಎಂದೇನು ಹೇಳಿಲ್ಲ. ಅವರು ತಮ್ಮ ಸ್ವಂತ ಹೊಣೆಗಾರಿಕೆಯಿಂದ ಎರಡನೇ ಬೆಳೆಯನ್ನು ಇಟ್ಟುಕೊಂಡಿರುವುದಕ್ಕೆ ನೀರು ಸಿಗದೆ ಇದ್ದರೆ ಪರಿಹಾರ ಕೊಡಲಿಕ್ಕೆ ಸಾಧ್ಯವಿಲ್ಲ

ಶ್ರೀ ನಂಜಯ್ಯ ಮಾತ್.—ಕುಡಿಯುವ ನೀರಿನ ವ್ಯವಸ್ಥೆಯನ್ನಾದರೂ ಮಾಡಿ.

ಅಧ್ಯಕ್ಷರು.—ಆ ಬಗ್ಗೆ ಮತ್ತೆ ಹೆಚ್ಚಿಗೆ ಪ್ರಸ್ತಾಪ ಮಾಡುವುದಕ್ಕೆ ಇಲ್ಲಿ ನಿಯಮಾವಳಿ ಪ್ರಕಾರ ಅವಕಾಶ ಇಲ್ಲ. ನೀವು ಬೇಕಾದರೆ ಅವರ ಛೇಂಬರಿಗೆ ಹೋಗಿ ಚರ್ಚೆ ಮಾಡಿ.

೨) ಕಾರವಾರ ಜಿಲ್ಲೆಯಂ ಸಿರಸಿ ತಾಲ್ಲೂಕಿನಲ್ಲಿ ಅರಣ್ಯಾಧಿಕಾರಿಗಳಂ ಬಡ ರೈತರಿಗೆ ಉರುವಲಂ ಕಟ್ಟಿಗೆ ಇತ್ಯಾದಿ ಬಗ್ಗೆ ಕಿರುಕುಳ ಕೊಡಂತ್ತಿರುವುದಂ,

ಶ್ರೀ ಜಿ. ಎಂ. ಕಾನಡೆ.—ಸಿರಸಿಯಲ್ಲಿ ಶ್ರೀ ಚಂದ್ರಪಾಂಡೆ ಎಂಬ ಅರಣ್ಯಾಧಿಕಾರಿಯನ್ನು ಹಾಕಿದ್ದೀರಿ. ನಮ್ಮಲ್ಲಿ ರೈತರು ಬಹಳ ಮಂದಿ ಇದ್ದಾರೆ. ಅವರಲೆ ಬಡವರೇ ಆಗಿದ್ದಾರೆ. ನಿಮ್ಮ ಕಡೆ ದನಗಳು ಗದ್ದೆ ತಿನ್ನುವುದಿಲ್ಲ, ನಮ್ಮ ಕಡೆ ತಿನ್ನುತ್ತವೆ. ಅವನ್ನು ತಡೆಗಟ್ಟಲಿಕ್ಕೆ ಮುಳ್ಳು ಬೇಲಿ ಕಟ್ಟುತ್ತಾರೆ. ಆ ಬೇಲಿಗೆ ಬೇಕಾದ ಮುಳ್ಳನ್ನು ಕಡಿಯುವುದಕ್ಕೆ ಸಹ ನಿಮ್ಮ ಅರಣ್ಯ ಅಧಿಕಾರಿಗಳು ಬಿಡುತ್ತಿಲ್ಲ. ಒಂದು ಪಕ್ಷ ಕಡಿದರೆ ತಕ್ಷಣ ಪೋಲೀಸ್ ಠಾಣೆಗೆ ಕರೆದುಕೊಂಡು ಹೋಗಿ ಹೊಡೆಸುತ್ತಾರೆ ಯಾರೇ ಆಗಲಿ ಕತ್ತಿ ತೆಗೆದುಕೊಂಡು ಜಮೀನು ಹತ್ತಿರ ಹೋದರೆ ಸಾಕು ಹಿಡಿದು ಹೊಡೆಯುತ್ತಾರೆ, ಈ ರೀತಿ ೬-೮ ಕೇಸುಗಳಾಗಿವೆ. ನೀವು ಅರಣ್ಯವನ್ನು ಕಡಿಯಂ ಬಾರದೆಂದು ಹೇಳುವುದನ್ನು ನಾನು ಒಪ್ಪುತ್ತೇನೆ. ಆದರೆ ಒಣಗಿದ ಮುಳ್ಳುಗಳನ್ನು ತಂದು ಬೇಲಿಗೆ ಹಾಕಲಿಕ್ಕೆ ಹೋದಾಗ ಹೊಡೆಯುವುದು ಸರಿಯಲ್ಲ. ಹುಬ್ಬಳ್ಳಿ ಸಮೀಪದಲ್ಲಿ ಸಣ್ಣಕೆರೆ ಎಂಬ ಊರು ಇದೆ ಆ ಊರಿಗೆ ಅರಣ್ಯದಿಂದ.....

ಅಧ್ಯಕ್ಷರು.—ಸಂಕ್ಷಿಪ್ತವಾಗಿ ಹೇಳಿ, ಬೇಗ ಮುಗಿಸಿ,

ಶ್ರೀ ಜಿ. ಎಂ. ಕಾನಡೆ.—ಬಡವರ ಸಮಸ್ಯೆಗಳು ಬಹಳ ಇವೆ. ಈ ರೀತಿ ಅರ್ಜೆಂಟ್ ಮಾಡಿದರೆ ಕುಳಿತುಕೊಳ್ಳುತ್ತೇನೆ ನೀವು ಗಡಿಬಿಡಿ ಮಾಡಿದರೆ ಆಗುವುದಿಲ್ಲ.

ಅಧ್ಯಕ್ಷರು.—ನೀವು ರೂಲ್ ೨೩ಳಿರ ಕೆಳಗೆ ವಿಚಾರವನ್ನು ಎತ್ತುವುದು ಅಷ್ಟೆ ಅದಕ್ಕೆ ಮಂತ್ರಿಗಳು ಉತ್ತರಿಸುತ್ತಾರೆ.

ಶ್ರೀ ಜಿ. ಎಂ. ಕಾನಡೆ.—ಹುಬ್ಬಳ್ಳಿಯಿಂದ ಸಣ್ಣಕೆರೆಗೆ ಹೋಗಬೇಕಾದರೆ ಜಂಗಲ್‌ನಲ್ಲಿ ೨೪ ಅಡಿ ಆಗಲದ ೬ ಕಿಲೋಮೀಟರ್ ರಸ್ತೆಯನ್ನು ಮಾಡಿದ್ದಾರೆ. ಆ ಊರಿಗೆ ಹೋಗಬೇಕಾದರೆ ಮರಗಳ ಬುಡ ಮಾತ್ರ ಇದೆ, ಮೇಲಿನದು ಎಲ್ಲಿ ಹೋಗಿದೆ ಎಂದು ಗೊತ್ತಿಲ್ಲ. ಎರಡನೆಯದಾಗಿ ನಮ್ಮಲ್ಲಿ ಕಲ್ಲನ್ನು ನೆಲದಿಂದ ಕಡಿದು ತೆಗೆದು ಮನೆ ಕಟ್ಟುತ್ತಾರೆ. ಆ ಕಲ್ಲನ್ನು ಕಡಿಯುವುದಕ್ಕೆ ಮೂರು ತಿಂಗಳ ಹಿಂದೆ ಅರ್ಜಿ ಕೊಟ್ಟರೆ ಅವರಿಗೆ ಕಲ್ಲು ಕಡಿಯುವುದಕ್ಕೆ ಲೈಸೆನ್ಸ್ ಕೊಡುವುದಿಲ್ಲ. ನಂತರ ದುಡ್ಡು ಕೊಟ್ಟವರಿಗೆ ಕೊಡುತ್ತಾರೆ ಇತ್ತೀಚೆಗೆ ದುಡ್ಡು ತುಂಬದ ಚಲನ್ ಕೂಡ ಇದೆ. ಒಂದು ನಾಟವನ್ನು ಸಿದ್ಧವಾಗುವುದವರಿಗೆ ಹನ್ನೆರಡೂವರೆ ಸಾವಿರ ರೂಪಾಯಿಗಳಿಗೆ ಕೊಟ್ಟಿದ್ದಾರೆ. ಅದಕ್ಕೆ ಇಪ್ಪತ್ತೆರಡೂವರೆ ಸಾವಿರ ರೂಪಾಯಿ ಬೇಡಿಕೆ ಇದ್ದರೂ ಅಷ್ಟು ಕಡಿಮೆ ಬೆಲೆಗೆ ಕೊಟ್ಟಿದ್ದಾರೆ. ಅದೇ ನಾಟವನ್ನು ಅವರು ಬೇರೆ ಊರಿನವರಿಗೆ ೨೫ ಸಾವಿರ ರೂಪಾಯಿಗಳಿಗೆ ಮಾರಿದ್ದಾರೆ. ೬ ಸಾವಿರ ರೂಪಾಯಿಗಳನ್ನು.....

ಅಧ್ಯಕ್ಷರು.—ಭಾಷಣವನ್ನೇ ಶುರು ಮಾಡಿದ್ದೀರಿ. ವಿಚಾರವನ್ನು ಪ್ರಸ್ತಾಪಿಸಿ. ಈ ರೀತಿ ನೀವು ಮಾತನಾಡುತ್ತಾ ಹೋದರೆ ಇಡೀ ಒಂದು ದಿವಸ ಆಗುತ್ತದೆ.

ಶ್ರೀ ಜಿ. ಎಂ. ಕಾನಡೆ.—ಈ ರೀತಿ ಗಡಿಬಿಡಿ ಮಾಡಿದರೆ ಬಹಳ ತೊಂದರೆಯಾಗುತ್ತದೆ. ನಮಗೆ ಓಟು ಕೊಟ್ಟ ಬಡವರ ಸಮಸ್ಯೆಗಳನ್ನು ಇಡುತ್ತಿದ್ದೇನೆ.